ಕಲ್ಪನೆಯಲ್ಲಿ, ಇವರ ಪ್ರೀತಿ ನಿಷ್ಠೆಗಳ ಜೊತೆ ಇವರ ಪರಿಶ್ರಮದ ಬೆವರು ಹನಿಗಳು ಬೆರೆತಿವೆ!

1887ರಲ್ಲಿ ಸ್ಥಾಪನೆಗೊಂಡು, 1894ರ ಮಾರ್ಚ್ ತಿಂಗಳಲ್ಲಿ 'ದಿ ಸಂಸ್ಕೃತ್ ಲಿಟರರಿ ಸೊಸೈಟಿ' ಎಂಬುದಾಗಿ ಈ ಸಂಸ್ಥೆಯ ಹೆಸರು ಸರ್ಕಾರಿ ಕಡತಗಳಲ್ಲಿ ನೋಂದಾವಣೆಗೊಂಡಿತು. ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ 1952ರಲ್ಲಿ ರಿಜಿಸ್ಟ್ರೇಶನ್ ಕೂಡಾ ಆಯಿತು. ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಜ್ಞಾನವನ್ನು ಸಂರಕ್ಷಿಸುತ್ತ ಅದನ್ನು ಪಸರಿಸುವ ಉದ್ದೇಶವೇ ಈ ಸಂಸ್ಥೆಯ ಮೂಲಭೂತ ಗುರಿಯಾಗಿದೆ.

ಭಾರತ ದೇಶ ಬ್ರಿಟಿಷರ ಆಳ್ವಿಕೆಗೊಳಗಾಗಿದ್ದ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಉಡುಗೆ ತೊಡುಗೆಗಳು ನಮ್ಮಲ್ಲೂ ವ್ಯಾಪಕವಾಗಿ ಕಾಣಿಸಿಕೊಂಡವು. ಭಾರತದ ಪರಂಪರೆಯ ಹೊಳಪು ಮಾಸುತ್ತಿದೆ ಎನ್ನುವ ಸಂದರ್ಭದಲ್ಲಿ, 'ಬ್ರಹ್ಮ ಸಮಾಜ', 'ಆರ್ಯ ಸಮಾಜ'ಗಳಂಥ ಸಂಸ್ಥೆಗಳು ಹಾಗೂ ಅನೇಕ ಚಿಂತಕರು 'ಭಾರತೀಯ ಚಿಂತನ ಪರಂಪರೆ'ಗಳ ಪುನರುತ್ಥಾನಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಅ ಪರಂಪರೆಯ ಭಾಗವಾಗಿ ಜನ್ಮವೆತ್ತಿದ ಸಂಸ್ಥೆ ಧಾರವಾಡದ ಸಂಸ್ಕೃತ ಪಾಠಶಾಲೆ. ಅದ್ವೈತ ತತ್ವ ಸಿದ್ಧಾಂತಗಳ ಹರಿಕಾರರಾದ ಶ್ರೀಮದ್ ಆದಿಶಂಕರರ ತತ್ವ ಪ್ರಣಾಲಿಗಳ ಅಧ್ಯಯನದ ವ್ಯವಸ್ಥೆಯು ಇಲ್ಲಿದೆ. ವೇದ, ಉಪನಿಷತ್ತು, ರಾಮಾಯಾಣ–ಮಹಾಭಾರತ ಮಹಾಕಾವ್ಯಗಳು ಮತ್ತು ಭಾರತೀಯ ಶಾಸ್ತ್ರಾಧ್ಯಯನಗಳು ಇಲ್ಲಿ ಬೆಳಗು ಬೈಗಿನಲ್ಲಿ ನಿರಂತರವಾಗಿ ನಡೆಯಲು ಕಾರಣೀಭೂತರಾದವರು ಸಂಸ್ಕೃತ ಭಾಷಾ ತಜ್ಞರು, ಶಾಸ್ತ್ರಗಳ ಪಂಡಿತರು ಮತ್ತು ಈ ಊರಿನ ಉದಾರ ದಾನಿಗಳು.

ಸಂಸ್ಕೃತ ಪಾಠಶಾಲೆ 1951ರಲ್ಲಿ ತನ್ನ ವಜ್ರಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿಕೊಂಡಿತು. ಈಗಾಗಲೇ ತಿಳಿಸಿದಂತೆ ಈ ಪಾಠಶಾಲೆಯ ಸಂಸ್ಥಾಪಕರಲ್ಲಿ ಅಗ್ರಗಣ್ಯರಾದ ಪಾಠಕ್ ಗುರುನಾಥರಾಯರು ಒಂದೊಂದು ರೂಪಾಯಿಯನ್ನು ಸಾರ್ವಜನಿಕರಿಂದ ಬೇಡಿ ಸಂಗ್ರಹಿಸಿ ಪಟ್ಟ ಕಷ್ಟಗಳ ಕತೆಯು ಕೇಳುಗರ ಕಣ್ಣುಗಳನ್ನು ತೇವಗೊಳಿಸುತ್ತದೆ. ಈ ಕಟ್ಟಡವು ನಿರ್ಮಾಣವಾಗುತ್ತಿರುವ ಹಂತದಲ್ಲಿ ಸ್ವಂತ ತಮ್ಮ ಮನೆಯಲ್ಲಿ ಮತ್ತು ಅಕವಲೆ ಪಾಂಡುರಂಗರಾಯರ ಮನೆಯಲ್ಲಿ ವಿದ್ಯಾರ್ಥಿಗಳನ್ನು ಇರಿಸಿಕೊಂಡು ಪೋಷಿಸಿದ ಕ್ರಮವು ಪ್ರಶಂಸನೀಯ.

ಪಾಠಶಾಲೆಯ ಕಟ್ಟಡಕ್ಕಾಗಿ ಬೇಕಾದ ಭೂಮಿಯನ್ನು ದಾನವಾಗಿ ಕೊಟ್ಟ ಉದಾರಿಗಳು ಲೋಖಂಡೆ ಶ್ರೀಪಾದರಾಯರು. ಕಟ್ಟಡ ಕಾಮಗಾರಿಯ ಸುದೀರ್ಘ ಅವಧಿಯಲ್ಲಿ ಹಗಲು ರಾತ್ರಿ ನಿಂತುಕೊಂಡು ಮೇಲ್ವಿಚಾರಣೆ ಮಾಡುತ್ತಿದ್ದವರು ಮತ್ತಾರೂ ಆಗಿರದೆ ಪಾಠಕ್ ಗುರುನಾಥರಾಯರೇ ಆಗಿದ್ದರು.

ಪಾಠಶಾಲೆಯ ಮೊದಲ ಅಂತಸ್ತಿನಲ್ಲಿ ನ್ಯಾಯ, ವ್ಯಾಕರಣಾದಿ ಪ್ರೌಢಶಾಸ್ತ್ರಗಳ ಅಧ್ಯಾಪನವು ನಡೆದರೆ, ಎರಡನೆಯ ಅಂತಸ್ತಿನಲ್ಲಿ ಕಾವ್ಯ, ನಾಟಕ ಮತ್ತು ಅಲಂಕಾರ ಶಾಸ್ತ್ರಗಳಂಥ ಸಾಹಿತ್ಯದ ಅಧ್ಯಯನವು ನಡೆಯುತ್ತದೆ. ಈ ಮಹಡಿಯಲ್ಲಿ ಪುರಾಣ ಪಠಣ, ಪ್ರವಚನ ಮತ್ತು ಸಾರ್ವಜನಿಕ ಉತ್ಸವಗಳು ನಡೆಯುತ್ತವೆ. ಮೂರನೇ ಅಂತಸ್ತಿನಲ್ಲಿ ವೇದಾಧ್ಯಯನ ಮತ್ತು ನಾಲ್ಕರಲ್ಲಿ ವೇದಾಂತಾಧ್ಯಯನಗಳು ನಡೆಯುತ್ತವೆ. ಇಂಥ ಎತ್ತರದ ಕಟ್ಟಡವು ನಿರ್ಮಾಣವಾಗಿ ವಿದ್ಯಾರ್ಥಿಗಳ ಪ್ರವೇಶವಾದಾಗ ಅನೇಕರು ಆಕ್ಷೇಪವನ್ನು ಮಾಡಿದ್ದುಂಟು. ಬಂದವರು ಹದಿನೈದು–ಇಪ್ಪತ್ತು ವಿದ್ಯಾರ್ಥಿಗಳು. ಇಷ್ಟು ಕಡಿಮೆ ಮಂದಿಗೆ ಇಷ್ಟೆಲ್ಲಾ ವೆಚ್ಚ ಮಾಡಿ, ಶ್ರಮವಹಿಸಿ ಕಟ್ಟಿಸಿದ ಈ ದೊಡ್ಡ ಕಟ್ಟಡದ ಅಗತ್ಯವಿತ್ತೆ? ಎಂದು ಗೊಣಗಿದವರು ಕೆಲವರು. ಆದರೆ ಕನಸುಗಾರರಿಗೆ ಆ ದಿನದ ಚಿಂತೆಯಷ್ಟೇ ಇರುವುದಿಲ್ಲ. ಮುಂಬರುವ ಪರಿವರ್ತನೆಗಳಿಗೆ ಅವಕಾಶ ಮಾಡಿಕೊಡುವ ಅಗತ್ಯದ ಪರಿಕಲ್ಪನೆಯು ಇರುತ್ತದೆ.



ಸಂಸ್ಕೃತ ಪಾಠಶಾಲೆಗೆ ಬರುವ ತರುಣ ವಿದ್ಯಾರ್ಥಿಗಳು ಹೆಚ್ಚಾಗಿ ಬಡವರಿರುತ್ತಾರೆ, ಗ್ರಾಮೀಣ ಪ್ರದೇಶದವರಿರುತ್ತಾರೆ. ಅವರ ಊಟ ವಸತಿಗಾಗಿ ಪ್ರತ್ಯೇಕ ಕಟ್ಟಡದ ವ್ಯವಸ್ಥೆಯನ್ನು ಗಾಂಧಿಚೌಕಿನ ಹತ್ತಿರವಿದ್ದ ಕೆರೆ ತೆಳಗಿನ ಓಣಿಯಲ್ಲಿಯ ಒಂದು ಕಟ್ಟಡದಲ್ಲಿ ಮಾಡಲಾಯಿತು. ಆ ವಿದ್ಯಾರ್ಥಿಗಳ ಪಾಲನೆ ಪೋಷಣೆಯನ್ನು ಇಂದಿಗೂ ನೋಡಿಕೊಳ್ಳುತ್ತಿರುವವರು ಧಾರವಾಡದಲ್ಲಿ ವಾಸವಾಗಿದ್ದ ಅನೇಕ ಶ್ರೀಮಂತರು ಮತ್ತು ವ್ಯಾಪಾರಸ್ಥರು.

2019–2020ನೇ ಸಾಲಿನ ಪಾಠಶಾಲೆಯ ವರದಿಯ ಪ್ರಕಾರ ಮೊದಲಿನ ಗುರುಕುಲ ಪದ್ಧತಿಯೇ ಇಂದಿಗೂ ಮುಂದುವರೆದಿದೆ. ಈಗಿರುವ ವಿದ್ಯಾರ್ಥಿಗಳ ಸಂಖ್ಯೆಯು ಕೇವಲ 12 ಮಾತ್ರ. ಇಲ್ಲಿ ಪಠ್ಯಪುಸ್ತಕ ರಚನೆ, ಪರೀಕ್ಷಾ ಪದ್ಧತಿಗಳೂ ಮೊದಲಿನಂತಿವೆ. ಪಾಠಶಾಲೆಯ ಎರಡನೇ ಅಂತಸ್ತಿನಲ್ಲಿ 'ಶ್ರೀ ವಿದ್ಯಾರಾಮಚಂದ್ರ ಸಭಾಭವನ'ದಲ್ಲಿ ಆಗಾಗ ಸಾರ್ವಜನಿಕರಿಗಾಗಿ ವೇದೋಪನಿಷತ್ತು ವ್ಯಾಖ್ಯಾನ ಮಾಲೆಗಳು, ಪ್ರಸ್ಥಾನತ್ರಯ ಮತ್ತು ಪಾಠ ಪ್ರವಚನಗಳೂ ವರ್ಷವಿಡೀ ನಡೆಯುತ್ತವೆ. ಸಾರ್ವಜನಿಕರಿಗಾಗಿ ಪ್ರವಚನಗಳಿಗೆ ಶ್ರೋತೃಗಳಾಗಿ ಬಂದಾಗ ಪಾಠಶಾಲೆಗೆ ಹೆಚ್ಚಿನ ಜೀವಕಳೆ ತುಂಬುತ್ತದೆ.

ಉಪಜೀವಿಕೆಗಾಗಿಯೇ ನಿರ್ಮಾಣಗೊಂಡ ಇಂದಿನ ಬಹುತೇಕ ವಿದ್ಯಾಲಯಗಳಲ್ಲಿ ತುಂಬಿತುಳುಕುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಲೆಯಲ್ಲಿಟ್ಟುಕೊಂಡು ನೋಡಿದಾಗ ಈ ಪಾಠಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ನಿರಾಸೆಯನ್ನು ಹುಟ್ಟಿಸುತ್ತದೆ. ಇಲ್ಲಿ ಅಧ್ಯಯನ ಪೂರೈಸಿದ ವಿದ್ಯಾರ್ಥಿಗಳು ದೇಶದ ಅನೇಕ ಮಠಮಾನ್ಯಗಳಲ್ಲಿ ಸಂಸ್ಕೃತ ಭಾಷೆ, ಪುರಾಣ, ಶಾಸ್ತ್ರಾದಿಗಳನ್ನು ಕಲಿಸುವ ಗುರುಗಳಾಗುತ್ತಾರೆ ಅಥವಾ ಕೆಲವರು ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತದಲ್ಲಿ ಮಾಸ್ಟರ್ ಡಿಗ್ರಿಯನ್ನು ಪಡೆದು ಪ್ರಥಮ ದರ್ಜೆಯ ಕಾಲೇಜುಗಳಲ್ಲಿ ಅಧ್ಯಾಪನ ವೃತ್ತಿಯನ್ನು ಕೈಕೊಂಡಿದ್ದಾರೆ. ಆದರೆ ಪೌರೋಹಿತ್ಯದ ಮೇಲೆ ಉಪಜೀವನ ನಡೆಸುವವರೇ ಬಹುತೇಕ ವಿದ್ಯಾರ್ಥಿಗಳೆಂಬುದು ವಾಸ್ತವದ ಸಂಗತಿ.

ಸಂಸ್ಕೃತ ಭಾಷೆಯನ್ನು ಮತ್ತು ಭಾರತೀಯ ತತ್ವಜ್ಞಾನದಂಥ ಉನ್ನತ ವಿದ್ಯೆಯನ್ನು ಕಲಿಯಬೇಕೆಂಬ ಪ್ರೀತಿ ಇಂದಿನ ತರುಣ ಜನಾಂಗದಲ್ಲಿಲ್ಲ. ಎಲ್ಲರೂ ಐ.ಟಿ./ಬಿ.ಟಿ. ಬೆನ್ನತ್ತಿ ಪರದೇಶಕ್ಕೆ ಹೋಗಬೇಕೆಂಬ ಹಂಬಲದವರೇ. ಇದು ಈ ಸಮಯದ ಕಾಲಧರ್ಮ ಎನ್ನಬಹುದು.

ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಜನೆ ಮಾಡಬೇಕೆಂಬ ಉತ್ಸುಕತೆಯು ಮುಂದಿನ ದಿನಗಳಲ್ಲಿ ಮೂಡೀತು ಎಂಬುದು ನಮ್ಮಲ್ಲಿ ಅನೇಕರ ಕನಸಾಗಿದೆ. ನಮ್ಮ ಹಿರಿಯರು ಧಾರವಾಡದ ಸಂಸ್ಕೃತ ಪಾಠಶಾಲೆಯನ್ನು ಜನರ ಉನ್ನತಿಗಾಗಿಯೇ ಬಿಟ್ಟು ಹೋದಂತಹ ಮೌಲಿಕ ಬಳುವಳಿಯಾಗಿದೆ. ಇಲ್ಲಿ ಅವರು ಕಂಡ ಕನಸುಗಳಿವೆ, ಸುರಿಸಿದ ಬೆವರು ಹನಿಗಳಿವೆ, ಹೃದಯದ ಬಡಿತಗಳ ಸದ್ದಿದೆ. ಈ ಪಾಠಶಾಲೆಯ ಸಂರಕ್ಷಣೆ ಮತ್ತು ಇದರ ಅಭಿವೃದ್ಧಿಯು ನಮ್ಮ ಪಾಲಿನ ಕರ್ತವ್ಯ.

ಪ್ರತಿಕ್ರಿಯಿಸಿ: **feedback@sudha.co.in**